ಸರಿತಾ ಆಗಲೂ ತಂತ್ರಗಾರ್ತಿಯಾಗಿದ್ದಳು, ಈಗಲೂ ಹಾಗೆಯೇ ಇದ್ದಾಳೆ. ಅವಳಿಗೆ ನನ್ನ ಮನಸ್ಸಿನ ಮಾತು ತಿಳಿಯಿತು.

"ಉದಯ... ನಾನು ಮುದುಕಿಯಾಗಿದ್ದೇನೆ, ನೀನಿನ್ನೂ ಯುವಕನಾಗಿದ್ದೀಯ ಎಂದು ಹೇಳಬೇಡ."

"ಇಲ್ಲ ಇಲ್ಲ, ಸರಿತಾ, ನೀನು ಹೇಳದಿದ್ದರೂ, ನನಗೆ ಅರ್ಥವಾಗುತ್ತಿತ್ತು. ಹೇಗಿದ್ದೀಯ, ತುಂಬಾ ವರ್ಷಗಳಾದವು."

"ವಿಷಯಕ್ಕೆ ಬರೋಣವೇ? ಲಾಲಾ ನಿನ್ನೆ ರಾತ್ರೆ ನಮ್ಮ ಮನೆಗೆ ಬಂದಿದ್ದ. ನನ್ನ ಮಗಳಿಗೂ ಇವನೇ ಗಂಡನ್ನು ಹುಡುಕಿದ್ದ. ಮಾತುಕತೆಯ ಮಧ್ಯೆ ನಿನ್ನ ವಿಷಯ ಬಂತು, ನೀನು ನಿನ್ನ ಮಗನಿಗೆ ಹುಡುಗಿಯನ್ನು ಹುಡುಕುವುದು ಎಷ್ಟು ಕಷ್ಟವಾಗುತ್ತಿದೆ ಎಂದೂ ಹೇಳಿದ. ಅವನು ನಿನ್ನ ಬಗ್ಗೆಯೇ ಹೇಳುತ್ತಿದ್ದಾನೆಂದು ನನಗೆ ಅರ್ಥವಾಯಿತು. ಸರಿ, ನಾನು ನಿನ್ನನ್ನು ಭೇಟಿಯಾಗಲು ಬಂದೆ. ನಾನು ಟೈಮ್‌ಪಾಸಿಗಾಗಿ ಸೋಶಿಯಲ್ ವರ್ಕ್ ಮಾಡುತ್ತೇನೆ. ನನ್ನಿಂದ ನಿನಗೇನಾದರೂ ಸಹಾಯವಾಗುವುದಾದರೆ... ಹೇಳು."

"ಯಾಕಾಗಬಾರದು, ಕೂತ್ಕೋ... ಏನು ಕುಡೀತೀಯ?"

"ನೀನು ಕುಡಿಯಬೇಕೆಂದು ಬಯಸುತ್ತಿದ್ದೀಯಲ್ಲ, ಅದು ಬೇಡ. ಚಹಾಕಾಫಿ, ಯಾವುದಾದರೂ ಆದೀತು. ನೋಡು, ನಮ್ಮ ಕಾಲದಲ್ಲಿ ಇದು ಮಾತ್ರವಿತ್ತು."

ಹತ್ತು ನಿಮಿಷ... ಹತ್ತು ನಿಮಿಷಗಳ ನಂತರ ಮತ್ತೆ ನನಗೆ ಜ್ಞಾನೋದಯವಾಯಿತು. ನಾನು ವಾಸ್ತವವಾಗಿಯೂ ನನ್ನ ಸಮವಯಸ್ಕರೊಂದಿಗೆ ಭೇಟಿಯಾಗಲು ಯೋಗ್ಯನಾಗಿ ಉಳಿದಿಲ್ಲ.

ಸರಿತಾಳ ಮಾತುಗಳು, ಅವಳ ಗಂಡ, ಅವರ ಅನಾರೋಗ್ಯ, ತನ್ನ ಹೆಣ್ಣು ಮಕ್ಕಳ ಮದುವೆ, ಅವರ ಅತ್ತೆಮನೆಯವರ ವೈಖರಿ, ತನ್ನ ಕಾಲುಗಳ ನೋವು ಇದಕ್ಕಿಂತ ಮುಂದಕ್ಕೆ ಹೋಗಲಿಲ್ಲ. ಇವಳು ಇಲ್ಲಿಂದ ಯಾವಾಗ ಹೋಗುವಳೋ, ನಾನು ಯಾವಾಗ ಫ್ರಿಡ್ಜ್‌ನ ಬಾಗಿಲು ತೆರೆದು ಅಮೃತದ ಕೆಲವು ಹನಿಗಳನ್ನು ನನ್ನ ಹೊಟ್ಟೆಗೆ ಹಾಕಿಕೊಳ್ಳುವುದೋ ಎಂದೆಲ್ಲಾ ಯೋಚಿಸಿ ನಾನು ವ್ಯಗ್ರನಾಗಿದ್ದೆ.

ಸರಿತಾಳ ಮಾತು ಮುಗಿದ ನಂತರ ಲಾಲಾ ಹೇಳಿದ, "ಅಂಕಲ್, ನಾಳೆ ನಾನು ನಿಮ್ಮನ್ನು ಇಲ್ಲಿಯ ಕಲೆಕ್ಟರ್ ಬಳಿಗೆ ಕರೆದೊಯ್ಯುತ್ತಿದ್ದೇನೆ, ಅವರಿಗೂ ಸಹ ವೈಫ್ ಇಲ್ಲ. ಅವರ ಮಗಳು ದಿಲ್ಲಿ ಯೂನಿವರ್ಸಿಟಿಯಲ್ಲಿ ಓದುತ್ತಿದ್ದಾಳೆ. ನಾವು ಸರಿತಾ ಆಂಟಿಯನ್ನು ನಿಮ್ಮ ತಂಗಿಯನ್ನಾಗಿ ಮಾಡಿಕೊಂಡು ಕರೆದೊಯ್ಯೋಣ. ಸರಿತಾ ಅವರೇ ಮಾತನಾಡುವುದಕ್ಕೆ ಬಿಡಿ... ನೀವು ಸುಮ್ಮನೆ ತಲೆಯಾಡಿಸುತ್ತಿರಿ. ಅವರದ್ದು ಒಳ್ಳೆಯ ಕುಟುಂಬ, ಸಾರ್. ಅಲ್ಲಿ ಎಲ್ಲಾ ಸರಿಯಾದರೆ, ಒಳ್ಳೆಯದಾಯ್ತಲ್ಲ, ಸಾರ್."

ಸರಿತಾ ನನ್ನ ಪರವಾಗಿ ಮಾತನಾಡುವಳೇ? ಏನು? ಅವಳಿಗೆ ನನ್ನ ಪರಿವಾರದ ಬಗ್ಗೆ ಏನೇನೂ ಗೊತ್ತಿಲ್ಲ. ನಾನು ಮಧ್ಯದಲ್ಲಿ ತಡೆಯಲು ಯತ್ನಿಸಿದೆ, ಆದರೆ ಮೌನವಹಿಸಿದೆ. ಈ ವೇಳೆಯಲ್ಲಿ ಸರಿತಾಳೆದುರು ನನ್ನ ಬಯೋಡಾಟ ಬಿಚ್ಚುವುದು ಉಚಿತವೆಂದು ತೋರುತ್ತಿರಲಿಲ್ಲ.

"ಅಂಕಲ್, ನೀವು ಜೀನ್ಸ್ ಬದಲು ಸರಿಯಾದ ಉಡುಪು ಧರಿಸಿ; ಕುರ್ತಾದಂಥ ಉಡುಪುಗಳನ್ನು ಧರಿಸಿ. ಪ್ಲೀಜ್ ಅಂಕಲ್... ನನ್ನ ಮರ್ಯಾದೆಯನ್ನು ಕಾಪಾಡಿ." ಹೋಗುವಾಗ ಲಾಲಾ ನನ್ನನ್ನು ಎಚ್ಚರಿಸಿದ.

'ಲಾಲಾನ ಮರ್ಯಾದೆ? ಅದು ನನ್ನ ಕುರ್ತಾದಲ್ಲಿದೆಯೇ? ಈ ದುರದೃಷ್ಟ ಜಗತ್ತಿಗೆ ಏನಾಗಿದೆ?